

ಕೊಂಚ ಅರಿವಿದ್ದರೂ ಸಾಕು. ಅವುಗಳ ಖಾಸಗಿತನಕ್ಕೆ ಧಕ್ಕೆಯಾಗದಂತೆ ನಿಗಾ ವಹಿಸಿ ವೀಕ್ಷಿಸಬಹುದು. ನೋಡಲು ಮುಗ್ಧವೂ, ಅಯ್ಯೋ ಪಾಪ ಎನಿಸುವಷ್ಟು ಸೈಲೆಂಟಾಗಿಯೂ ಮೊದಲ ನೋಟದಲ್ಲಿ ಕಾಣುವ ಕುಂಜರಗಳಿಗೆ ಸಿಟ್ಟು ಬಂದರೆ ಕಥೆ ಮುಗಿದಂತೆ.

ಅದು ಬೇಸಿಗೆ ಸಮಯ. ಸಂಜೆ ಐದು ಗಂಟೆ ಆಗಿರಬಹುದು. ಬೆಟ್ಟದ ಮೇಲಿಂದ ಇಳಿದ ಕರಿಗಳು ನೇರ ನೀರ ಕಿನಾರೆಗೆ ಬಂದಿದ್ದವು. ಗುಂಪಲ್ಲಿ ಎರಡು ಮೂರು ಪುಟ್ಟ ಮರಿಗಳು ಇರುವುದನ್ನು ಕಂಡು ನಾವೆಲ್ಲಾ ಪುಳಕಿತಗೊಂಡೆವು. ಕಾಡಿನ ಪ್ರಾಣಿ ಯಾವುದೇ ಇರಲಿ, ಅವುಗಳ ಜೊತೆಗೆ ಪುಟ್ಟ ಮರಿಗಳ ಇದ್ದಾಗ ಅದೇನೋ ಗೊತ್ತಿಲ್ಲ! ಅಪರಿಮಿತ ಖುಷಿಯಾಗುತ್ತದೆ. ಮೊದಲಿಗೆ ವಿಚಲಿತವಾದಂತೆ ಕಂಡ ಕರಿಗಳು, ನಾವು ಹೆಚ್ಚು ಸಮೀಪ ಹೋಗದೆ ಕೊಂಚ ದೂರವೇ ಉಳಿದ ಕಾರಣ ತಮ್ಮ ನೀರಿನಾಟವನ್ನು ಮುಂದುವರಿಸಿದವು. ದಂತಾವಲಗಳ ಸಮೀಪ ಹೋಗುವುದು ಯಾವತ್ತೂ ಅಪಾಯಕಾರಿ. ಯಾವ ಕ್ಷಣದಲ್ಲಾದರೂ ಅವು ಎಗರಿ ಬಂದು ನಮ್ಮನ್ನು ಧ್ವಂಸ ಮಾಡಬಲ್ಲವು. ಅವುಗಳ ಮೂಡು ಯಾವಾಗ, ಹೇಗಿರುತ್ತೆ ಎಂದು ಊಹಿಸುವುದು ಕಷ್ಟ. ಅನೇಕ ಸಲ ಸುಮ್ಮನಿದ್ದರೆ ಕೆಲವು ಸಲ ಮಾತ್ರ ಬಿಪಿ ಏರಿಸಿಕೊಂಡು ಎಗರಿ ಬಂದು ಬಿಡುತ್ತವೆ. ಯಾವ ಕ್ಷಣದಲ್ಲಿ ಪ್ರಾಣಿಯ ವರ್ತನೆ ಹೇಗಿರುತ್ತೆ ಎಂಬುದೆಲ್ಲವೂ ಕಾನನದಲ್ಲಿ ಅನಿಶ್ಚಿತ. ಒಂದೆರಡು ಸಲ ಆನೆಗಳ ಹಠಾತ್ ಆಕ್ರಮಣಕ್ಕೆ ಸಿಲುಕಿ ಬಚಾವಾಗಿ ಒಂದಿಷ್ಟು ವಿವೇಕ ಬಂದಿದೆ. ಇವತ್ತು ನಮಗೆ ಹಸ್ತಿಗಳಿಂದ ಹೆಚ್ಚು ಅಪಾಯಗಳು ಒದಗುವ ಸೂಚನೆಗಳಿರಲಿಲ್ಲ. ಏಕೆಂದರೆ ನಾವು